# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀಮತಿ ಬಲ್ಕಿಸ್ ಬಾನು ಇವರು ನಿಯಮ-72ರ ಅಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಉತ್ತರ.

**ವಿಷಯ**

**ವೃತ್ತಿ ಶಿಕ್ಷಣ (J.O.C) ಕೋರ್ಸ್‌ನ 3746 ಅರೆಕಾಲಿಕ ಭೋಧಕ/ಭೋಧಕೇತರ ಸಿಬ್ಬಂದಿಗಳ ಪೈಕಿ ಸರ್ಕಾರವು 3216 ಜನರನ್ನು ವಿಲೀನಗೊಳಿಸಿದ್ದು, ಇನ್ನುಳಿದ 530 ಸಿಬ್ಬಂದಿಗಳನ್ನು ವಿಲೀನಗೊಳಿಸಿರುವುದಿಲ್ಲ. ಸದರಿ 530 ಸಿಬ್ಬಂದಿಗಳಲ್ಲಿ ಹಲವರು ಈಗಾಗಲೇ ಮರಣ ಹೊಂದಿದ್ದು ಇನ್ನು ಕೆಲವರು ವಯೋಮಿತಿ ಮೀರಿದ್ದು ಈಗ ಕೇವಲ 250 ಸಿಬ್ಬಂದಿಗಳು ಮಾತ್ರ ಇರುತ್ತಾರೆ. ಸದರಿಯವರು ಕಡು ಬಡವರಾಗಿದ್ದು, ಎಸ್.ಸಿ/ಎಸ್.ಟಿ ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತ ಜನಾಂಗಕ್ಕೆ ಸೇರಿದವರು ಇದ್ದು ಇವರುಗಳನ್ನು ಮಾನವೀಯತೆಯ ದೃಷ್ಟಿಯಿಂದ ಖಾಯಂ ಮಾಡಿಕೊಳ್ಳುವ ಕುರಿತು.**

**ಉತ್ತರ**

ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 22 ಶಾಸನ 2011, ದಿನಾಂಕ: 06.04.2011 ರ ಕರ್ನಾಟಕ ವೃತ್ತಿ ಆಧಾರಿತ ಕೋರ್ಸುಗಳ ನೌಕರನನ್ನು ವಿಲೀನಗೊಳಿಸುವ ಅಧಿನಿಯಮ 2011 ಕಲಂ 3(ಎ) ರನ್ವಯ ವೃತ್ತಿ ಶಿಕ್ಷಣ ಇಲಾಖೆಯಲ್ಲಿ ದಿನಾಂಕ:06.04.2011 ರವರೆಗೆ "ಯಾವೊಬ್ಬ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರನನ್ನು ಆತನಿಗೆ ನೇರವಾಗಿ ಅನ್ವಯಿಸಬಹುದಾದಂಥ ಕಾರಣಗಳಿಗಾಗಿ ಆತನು ಸೇವಾ ಭಂಗವಿಲ್ಲದೆ 05 ವರ್ಷಗಳಿಗೆ ಕಡಿಮೆ ಇಲ್ಲದಂತೆ ನಿರಂತರವಾಗಿ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರನಾಗಿ ಕರ್ತವ್ಯವನ್ನು ನಿರ್ವಹಿಸಿದ್ದ ಹೊರತು, ವಿಲೀನಗೊಳಿಸತಕ್ಕದ್ದಲ್ಲ." ಎಂದು ಸೂಚಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಸದರಿ ಅಧಿಸೂಚನೆಯ ಪೂರ್ವದಲ್ಲಿ 3746 ಅರೆಕಾಲಿಕ ನೌಕರರು ವೃತ್ತಿ ಶಿಕ್ಷಣ ಇಲಾಖೆಯಲ್ಲಿ ಸೇವೆಸಲ್ಲಿಸುತ್ತಿದ್ದು. ಸದರಿ ವಿಲೀನ ವಿದೇಯಕದನ್ವಯ, ನಿರಂತರವಾಗಿ 05 ವರ್ಷ ಸೇವೆ ಪೂರೈಸಿದ್ದ 1263 ಸರ್ಕಾರಿ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅರೆಕಾಲಿಕ ನೌಕರರನ್ನು ಹಾಗೂ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಮತ್ತು ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಸೇವೆಸಲ್ಲಿಸುತ್ತಿದ್ದ1668, ಅರೆಕಾಲಿಕ ನೌಕರರನ್ನು ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ವಿಲೀನಗೊಳಿಸಿ ಸೇವೆಯನ್ನು ಸಕ್ರಮಗೊಳಿಸಲಾಗಿರುತ್ತದೆ.

ಸದರಿ ಅಧಿನಿಯಮದ ಕಲಂ 3(ಎ) ರ ಅನುಸಾರ ವರ್ಷ ವೃತ್ತಿ ಶಿಕ್ಷಣ ಇಲಾಖೆಯಲ್ಲಿ ಅರೆಕಾಲಿಕ ನೌಕರರಾಗಿ ನಿರಂತರ 05 ವರ್ಷ ಸೇವೆ ಸಲ್ಲಿಸದ (ಸೇವಾಭಂಗವಾಗಿರುವ) ಉಳಿದ 815 ಅರೆಕಾಲಿಕ ನೌಕರರನ್ನು ವಿಲೀನ ಪ್ರಕ್ರಿಯೆಯಿಂದ ಕೈಬಿಟ್ಟು ಕರ್ತವ್ಯದಿಂದ ಬಿಡುಗಡೆಗೊಳಿಸಲಾಗಿರುತ್ತದೆ.

ಮುಂದುವರೆದು, ಸದರಿ ಅಧಿನಿಯಮದ ಕಲಂ 3(1)ರ ಅನುಸಾರ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರ ವಿಲೀನಾತಿ ಪ್ರಕ್ರಿಯೆಯು ಒಂದು ಸಲದ ಕ್ರಮವಾಗಿದ್ದು ತಿದ್ದುಪಡಿಗೆ ಅವಕಾಶವಿರುವುದಿಲ್ಲ. ಈ ಕುರಿತು ನೌಕರರಿಂದ ಸ್ವೀಕೃತವಾಗಿದ್ದ ಮನವಿಗಳ ಹಿನ್ನೆಲೆಯಲ್ಲಿ ವಿಲೀನಾತಿ ಪ್ರಕ್ರಿಯೆಯಿಂದ ಬಾಕಿ ಉಳಿದ ಅರೆಕಾಲಿಕ ನೌಕರರನ್ನು ವಿಶೇಷ ನೇಮಕಾತಿ ನಿಯಮಗಳನ್ವಯ ನೂತನ ವಿಧೇಯಕವನ್ನು ತಿದ್ದುಪಡಿ ಮಾಡಲು ಅಥವಾ ಪುನಃ ತೆರೆಯುವ ಕುರಿತಂತೆ ಕಾನೂನು ಇಲಾಖೆಯ ಅಭಿಪ್ರಾಯ ಪಡೆಯಲಾಗಿದ್ದು "ಸಿವಿಲ್ ಅಪೀಲು ಸಂಖ್ಯೆ:3595-3612/1999 ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ: 10.04.2006 ರಂದು ನೀಡಿರುವ ತೀರ್ಪಿನಲ್ಲಿರುವ ಅವಕಾಶದ ಹಿನ್ನೆಲೆಯಲ್ಲಿ ಈ ಮೊದಲೇ ದಿನಾಂಕ:06.04.2011ರಂದು ಮಾಡಲಾದ ಸಂವ್ಯಶಾಇ 22 ಶಾಸನ 2011, ರಲ್ಲಿ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರನ್ನು ವಿಲೀನಗೊಳಿಸುವ ಅಧಿನಿಯಮವು ಊರ್ಜಿತವಾಗಿರುತ್ತದೆ. ಆದರೆ ಅಧಿನಿಯಮವನ್ನು ಪುನಃ ತೆರೆಯಲು ಅವಕಾಶವಿರುವುದಿಲ್ಲ ಮತ್ತು ಸದರಿ ಅಧಿನಿಯಮಕ್ಕೆ ತಿದ್ದುಪಡಿ ತರುವುದು ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನಗಳಿಗೆ ವ್ಯತಿರಿಕ್ತವಾಗುತ್ತದೆ. ಆದುದರಿಂದ, ಸದರಿ ವಿಲೀನ ವಿಧೇಯಕ- 2011 ನ್ನು ಪುನಃ ತೆರೆಯುವುದಾಗಲೀ ಅಥವಾ ತಿದ್ದುಪಡಿ ಮಾಡುವುದಾಗಲೀ ಅವಕಾಶವಿರುವುದಿಲ್ಲವೆಂದು" ಅಭಿಪ್ರಾಯ ನೀಡಿರುತ್ತದೆ. ಈ ಹಿನ್ನೆಲೆಯಲ್ಲಿ ವಿಲೀನಾತಿ ವಿಧೇಯಕಕ್ಕೆ ತಿದ್ದುಪಡಿ ಮಾಡಲು ಅಥವಾ ವಿಶೇಷ ನೇಮಕಾತಿ ನಿಯಮಗಳನ್ನು ರಚಿಸಲು ಅವಕಾಶವಿರುವುದಿಲ್ಲ.

**ಸಂಖ್ಯೆ:ಇಪಿ 46 ಟಿವಿಇ 2025**

(ಎಸ್.ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ
ಇಲಾಖಾ ಸಚಿವರು